# ಲಿಂಗತ್ವದ ಬಿಕ್ಕಟ್ಟುಗಳನ್ನು ಪರಿಹರಿಸುವ ಸಾಧ್ಯತೆಗಳು

ಹೆಚ್ಚು ಒಳಗೊಳ್ಳುವ ಕುಟುಂಬಗಳು ಮತ್ತು ಸಮುದಾಯಗಳತ್ತ



**ಶನಿವಾರ, ಮೇ 24, 2025**

**ಬೆಳಿಗ್ಗೆ 9:30 ರಿಂದ ಸಂಜೆ 5:00 ರವರೆಗೆ**

**ಸಭಾ, 262 ಕಾಮರಾಜ್ ರಸ್ತೆ,**
**ಶಿವಾಜಿನಗರ, ಬೆಂಗಳೂರು**

## ಪರಿಕಲ್ಪನಾ ಟಿಪ್ಪಣಿ ಹಾಗೂ ಕರೆಯೋಲ

ಹೆಣ್ಣುಮಕ್ಕಳು ಕೇವಲ ಪೊಲೀಸರ ದಾಖಲೆಗಳಲ್ಲಿ ಮಾತ್ರ ಅಲ್ಲದೆ, ನಮ್ಮ ಸಮೂಹ ಕಥನಗಳಲ್ಲಿಯೂ ಸಹ ಹೇಗೆ "ಕಾಣೆಯಾದವರಾಗುತ್ತಾರೆ?"
ನಮಗೆ ತಿಳಿದಿರುವಂತ "ಕುಟುಂಬ" ಎಂಬ ಕಲ್ಪನೆಯು ಹೆಣ್ಣುಮಕ್ಕಳ ಸ್ವಾಯತ್ತತೆ ಮತ್ತು ಸ್ವಾತಂತ್ರ್ಯಕ್ಕೆ ಅವಕಾಶ ಕಲ್ಪಿಸಿಕೊಡಬಲ್ಲದೇ?
ಒಂದು ಪಟ್ಟಣ ಅಥವಾ ಪ್ರದೇಶವು "ಅಪರಾಧ ಕೇಂದ್ರ"ವೆಂದು ಗುರುತಿಸಲ್ಪಟ್ಟಿದ್ದಲ್ಲಿ, ಅಲ್ಲಿನ ಯುವಕರು ಮತ್ತು ಯುವತಿಯರು ಸಹ ಹಾಗೆಯೇ ಗುರುತಿಸಲ್ಪಡುವುದರ ಪರಿಣಾಮವೇನು?
ಅವರು ನೆಲೆಗೊಂಡಿರುವ ಪರಿಸರದಿಂದ ರೂಪಗೊಂಡ ಪುರುಷತ್ವವೂ ಕೂಡ ಸೌಮ್ಯ ಸ್ವರೂಪ ಹೊಂದಬಹುದೇ? ಬದಲಾಗಬಹುದೇ? ಒಳಗೊಳ್ಳಬಹುದೇ?

ನಾಲ್ಕು ದಶಕಗಳಿಗೂ ಹೆಚ್ಚು ಕಾಲ, ಸೋಸೈಟಿ ಫಾರ್ ಇನ್‌ಫಾರ್ಮಲ್ ಎಜುಕೇಶನ್ ಅಂಡ್ ಡೆವಲಪ್ಮೆಂಟ್ ಸ್ಟಡೀಸ್ (SIEDS) ಸಂಸ್ಥೆಯ ಸಹಭಾಗಿತ್ವದಲ್ಲಿ ಗಮನ ಮಹಿಳಾ ಸಮೂಹ, ಸಮಾಜದಲ್ಲಿ ಲಿಂಗ ಸಮಾನತೆಯ ನ್ಯಾಯಕ್ಕಾಗಿ ನಡೆಸಿರುವ ಸ್ತ್ರೀವಾದಿ ಹೋರಾಟದ ಭಾಗವಾಗಿದೆ - ಕೇವಲ ಲಿಂಗಾಧಾರಿತ ಹಿಂಸೆಗೆ ಸ್ಪಂದಿಸುವುದಷ್ಟೇ ಅಲ್ಲದೆ, ಅದನ್ನು ಬೆಂಬಲಿಸುವಂತ ವ್ಯವಸ್ಥೆಗಳನ್ನು ಬಹಿರಂಗಪಡಿಸುವುದರಲ್ಲಿಯೂ ಸಹ ಸಕ್ರಿಯವಾಗಿ ತೊಡಗಿಸಿಕೊಳ್ಳುತ್ತಾ ಬಂದಿದೆ.

ಕೆಲವು ವರ್ಷಗಳ ಹಿಂದೆ, ಸೆಂಟರ್ ಫಾರ್ ಬಜೆಟ್ ಅಂಡ್ ಪಾಲಿಸಿ ಸ್ಟಡೀಸ್ (CBPS) ಸಂಸ್ಥೆಯ ಸಹಯೋಗದೊಂದಿಗೆ ಹಾಗೂ ಹಲವು ಸ್ಥಳೀಯ ಸಂಸ್ಥೆ ಹಾಗೂ ಸಂಘಟನೆಗಳ ಸಹಭಾಗಿತ್ವದಲ್ಲಿ, ನಾವು ಬೆಂಗಳೂರು ಪರಧಿಯಲ್ಲಿನ ವೇಗವಾಗಿ ಬದಲಾಗುತ್ತಿದ್ದಂತ ಆನೇಕಲ್ ತಾಲೂಕು ಮತ್ತು ಕೋಲಾರ ಜಿಲ್ಲೆಯಂತಹ ಎರಡು ಭೂಪ್ರದೇಶಗಳಲ್ಲಿ ಕ್ರಿಯಾ ಆಧಾರಿತ ಸಂಶೋಧನೆಯೊಂದನ್ನು ಕೈಗೊಂಡೆವು.

**ಕೋಲಾರದಲ್ಲಿ** ನಡೆಸಿದ ಅಧ್ಯಯನವು, ಪೊಲೀಸ್ ದಾಖಲೆಗಳಲ್ಲಿ ಅವರ ಕುಟುಂಬಗಳಿಂದ "ಕಾಣೆಯಾದ" ಮಹಿಳೆಯರ ಮೇಲೆ ಕೇಂದ್ರಿತವಾಗಿತ್ತು. ಈ ಮಹಿಳೆಯರು ಬೆಂಗಳೂರು ನಗರಕ್ಕೆ ಲೈಂಗಿಕ ಕೆಲಸಕ್ಕೆಂದು ಸಾಗಣೆ ಮಾಡಲ್ಪಟ್ಟವರು ಎಂದು ವ್ಯಾಪಕವಾಗಿ ಭಾವಿಸಲಾಗಿತ್ತು.  ಒಂದು ಕಾಲದಲ್ಲಿ ಕೃಷಿ ಉತ್ಪನ್ನಗಳನ್ನು ಬೆಂಗಳೂರು ನಗರಕ್ಕೆ ಸರಬರಾಜು ಮಾಡುತ್ತಿದ್ದ ಭಾಗಶಃ ನಗರ/ಗ್ರಾಮೀಣ ಕೇಂದ್ರವಾಗಿದ್ದ ಕೋಲಾರ ಜಿಲ್ಲೆ ಇದೀಗ ಒಂದು ಕೈಗಾರಿಕಾ ಕೇಂದ್ರವಾಗಿ ಬದಲಾದ ಹಿನ್ನೆಲೆಯಲ್ಲಿ ಈ ಸಂಶೋಧನೆ, ಮಹಿಳೆಯರು ಅವರ ಕುಟುಂಬಗಳನ್ನು ತೊರೆಯುವಂತೆ ಮತ್ತು ಹಿಂದಿರುಗುವಂತೆ ಮಾಡಿದ ಕಾರಣಗಳೇನು ಎಂಬುದನ್ನು ತೆರೆದಿಡುತ್ತದೆ. ಇದು ಕೇವಲ ಅಧೀನತೆಯ ಕಥೆ ಮಾತ್ರ ಅಲ್ಲದೆ ಸ್ವಾಯತ್ತತೆಯ ಕಥೆಯೂ ಹೌದು, ವೇಗವಾಗಿ ಬದಲಾಗುತ್ತಿರುವ ಭೂಪ್ರದೇಶವನ್ನು ಪ್ರಭಾವಿಸುತ್ತಿರುವ ಅಗೋಚರ ಹಾಗೂ ಸಾಂಸ್ಥಿಕ ಶಕ್ತಿಗಳ ಕಥೆಯೂ ಹೌದು.

ಇಂದು "ಅಪರಾಧ ಪಟ್ಟಣ" ಎಂಬ ಕಳಂಕವನ್ನು ಹೊತ್ತುಕೊಂಡಿರುವ **ಆನೇಕಲ್‌ನಲ್ಲಿ** ನಾವು ಅಪರಾಧದ ಸಮಕಾಲೀನ ಸ್ವರೂಪವನ್ನು ಮತ್ತು ಯುವಕರು, ಲಿಂಗ ಸಂಬಂಧಗಳು, ಹಾಗೂ ಬದಲಾಗುತ್ತಿರುವ ಜಾತಿ/ಧರ್ಮದ ಅಸ್ಮಿತೆಗಳ ಮೇಲಿನ ಅದರ ಪರಿಣಾಮಗಳನ್ನು ಅರ್ಥಮಾಡಿಕೊಳ್ಳಲು ಪುರುಷತ್ವದ ಮಸೂರವನ್ನು ಬಳಸಿದೆವು. 1970ರ ದಶಕದಿಂದಲೂ ಸತತವಾಗಿ ಕೈಗಾರಿಕೀಕರಣ, ಅಭಿವೃದ್ಧಿ ಮತ್ತು ನಗರೀಕರಣದ ಅಲೆಗಳ ಕೇಂದ್ರಬಿಂದುವಾಗಿರುವ ಈ ಪಟ್ಟಣವು ಅಪರಾಧ ಮತ್ತು ಪುರುಷತ್ವವು ಹೇಗೆ ಪರಸ್ಪರ ಸಂಬಂಧ ಹೊಂದಿವೆ ಎಂಬುದಕ್ಕೆ ಒಂದು ವಿಶಿಷ್ಟ ಉದಾಹರಣೆಯಾಗಿದೆ. ಯುವಕರು, ಮಹಿಳೆಯರು ಮತ್ತು ಪುರುಷರನ್ನು ಒಳಗೊಂಡ ವೈವಿಧ್ಯಮಯ ಸಮುದಾಯದೊಂದಿಗೆ ನಡೆಸಿದ ಸಂವಾದಗಳ ಮೂಲಕ ಈ ಅಧ್ಯಯನವು ಒಂದು ಒಳಗೊಳ್ಳುವ ಪರಿಸರವು ಹೇಗೆ ಕಾನೂನುಪರತೆ, ಲಿಂಗತ್ವ, ಹಾಗೂ ನೈತಿಕತೆಯ ಕುರಿತು ಇರುವ ಪ್ರಬಲ ಆಖ್ಯಾನಗಳಿಗೆ ಸವಾಲೊಡ್ಡುವಂತ ಹೆಚ್ಚು ವಿನಾಶಕಾರಿ ಅಲ್ಲದ, ಹೆಚ್ಚು ಹೊಂದಿಸಿಕೊಳ್ಳಬಹುದಾದ ಪುರುಷತ್ವದ ಪರಿಕಲ್ಪನೆಗಳನ್ನು ಪೋಷಿಸುವ ಸಾಧ್ಯತೆಗಳನ್ನು ಹೊಂದಿರಬಹುದು ಎಂಬುದರ ಕುರಿತು ಒಳನೋಟಗಳನ್ನು ಒದಗಿಸುತ್ತದೆ.

ಈ ಅಧ್ಯಯನಗಳು ರೂಢಿಗತವಾಗಿ ಬಳಸುವ ಅರ್ಥದಲ್ಲಿ “ವರದಿಗಳು” ಅಲ್ಲ. ಅಥವಾ ವಿಶಿಷ್ಟವೂ ಅಲ್ಲ. ಇವು ಕನ್ನಡಿಗಳಂತೆ, ನಕ್ಷೆಗಳಂತೆ, ನೆನಪಿನ ಬುತ್ತಿಗಳಂತಿದ್ದು ಅವು ನಮ್ಮನ್ನು ನಮ್ಮ ದೈನಂದಿನ ಜೀವನದಲ್ಲಿ ವಿಕಸನಗೊಳ್ಳುತ್ತಿರುವ ಲಿಂಗತ್ವ, ಸ್ವಾಯತ್ತತೆ ಮತ್ತು ಸೇರಿರುವ ಭಾವನೆಯ ಸ್ವರೂಪದ ಕುರಿತು ಪರ್ಯಾಲೋಚಿಸಲು ಕೋರುತ್ತದೆ. “ಕಾಣೆಯಾಗಿರುವ” ಹೆಣ್ಣುಮಕ್ಕಳಿಂದ ಹಿಡಿದು ಅಪರಾಧೀಕರಣಗೊಂಡ ಪುರುಷತ್ವಗಳನ್ನು ಕುಶಲವಾಗಿ ನಿಭಾಯಿಸುವ ಯುವಕರನ್ನು ಒಳಗೊಂಡಂತೆ ಕೋಲಾರ ಜಿಲ್ಲೆ ಮತ್ತು ಆನೇಕಲ್ ತಾಲೂಕಿನಿಂದ ಹೊರಹೊಮ್ಮುತ್ತಿರುವ ಈ ಕಥೆಗಳು ಸ್ವಾತಂತ್ರ್ಯ, ಅಪರಾಧ, ದಂಡನೆ, ನ್ಯಾಯ, ಅವಮಾನ, ಜಾತಿ, ಅಸ್ಮಿತೆ, ರಾಜಕಾರಣ ಮತ್ತು ಸಮುದಾಯದ ಬಗ್ಗೆ ಇರುವಂತ ನಮಗೆ ಅಹಿತಕರವೆನಿಸುವ ಸತ್ಯಗಳಿಗೆ ಮುಖಾಮುಖಿ ಆಗುವಂತೆ ಒತ್ತಾಯಿಸುತ್ತವೆ.

ಈ ಕೂಟವು ನಾಟಕ, ಕಥೆ ಹೇಳುವುದು, ಪುಸ್ತಕ ಓದುವುದು ಹಾಗೂ ಮುಕ್ತ ಸಂವಾದಗಳ ಮೂಲಕ ಸೃಜನಶೀಲವಾಗಿ ಮತ್ತು ಸಾಮೂಹಿಕವಾಗಿ ಈ ಅಧ್ಯಯನಗಳು ಎತ್ತಿದ ಪ್ರಶ್ನೆಗಳೊಂದಿಗೆ ತೊಡಗಿಸಿಕೊಳ್ಳಲು ನಮನ್ನು ಅಹ್ವಾನಿಸುತ್ತದೆ. ಬನ್ನಿ, ಒಟ್ಟಿಗೆ ನಾವು ಈ ಕೆಳಗಿನವುಗಳನ್ನು ಶೋಧಿಸೋಣ:

- ಸ್ವತಂತ್ರ ಮತ್ತು ಸ್ವಾಯತ್ತವಾಗಿರುವ ಮಹಿಳೆಯರು “ಕುಟುಂಬ”ದ ಪರಿಕಲ್ಪನೆಯನ್ನೇ ಮರುವ್ಯಾಖ್ಯಾನಿಸಬಹುದೇ?
- ಹೆಚ್ಚು ಒಳಗೊಳ್ಳುವ ಸಮುದಾಯಗಳ ಸಂದರ್ಭದಲ್ಲಿ ಪುರುಷತ್ವವನ್ನು ಮರುಕಲ್ಪಿಸಿಕೊಳ್ಳಬಹುದೇ?
- ಪ್ರಭುತ್ವವು ಸಾಮಾಜಿಕ ಹಾಗೂ ಕಾನೂನು ಬಹಿಷ್ಕೃತರು ಎಂದು ಗುರುತಿಸಲ್ಪಟ್ಟವರಿಗೆ ಹೊಣೆಗಾರಿಕೆ ವಹಿಸಿಕೊಳ್ಳಬಹುದೇ ಹಾಗೂ ಅವರನ್ನು ಒಳಗೊಳ್ಳಬಹುದೇ?

**ಕಮ್ಮಟದ ಕುರಿತು**
ಬೆಳಗ್ಗೆ, ಸಮುದಾಯ ಸದಸ್ಯರಿಂದ ನಾಟಕ ಪ್ರದರ್ಶನ ಹಾಗೂ ಕಥೆ ಹೇಳುವುದರೊಂದಿಗೆ ಪ್ರಾರಂಭಗೊಳ್ಳುವ ಕಮ್ಮಟವು ಸಮಾಂತರವಾಗಿ ಬದುಕಿನ ಅನುಭವಗಳನ್ನು ಶೋಧಿಸುವುದು ಹಾಗೂ ನಮ್ಮ ಕ್ರಿಯಾ ಆಧಾರಿತ ಅಧ್ಯಯನಗಳಿಂದ ವಾಚಿಸುವ ಅಧಿವೇಶನಗಳಲ್ಲಿ ಮುಂದುವರೆಯುತ್ತದೆ. ಮಧ್ಯಾಹ್ನದ ವಿರಾಮದ ನಂತರ ನಡೆಯುವ ಸಮಗ್ರ ಅಧಿವೇಶನದಲ್ಲಿ, ಸಮುದಾಯದ ಧ್ವನಿಗಳು, ಸ್ತ್ರೀವಾದಿ ಚಿಂತಕರು ಹಾಗೂ ಕಾರ್ಯಕರ್ತರ ನಡುವೆ ಪರಸ್ಪರ ಸಂವಾದ ಚರ್ಚೆಗಳ ಮೂಲಕ ಸಮಾಲೋಚನೆ ನಡೆಯುವುದು.

ಇದು ಸಮ್ಮೇಳನವಲ್ಲವೂ ಅಲ್ಲ, ವಿಚಾರಗೋಷ್ಠಿಯೂ ಅಲ್ಲ.
ಬದಲಿಗೆ, ಕೇವಲ ಒಂದು ಕೂಟವಷ್ಟೆ – ಚಿಂತನಾಶೀಲರಾಗಿ ಆಲಿಸಲು, ಹತಾಶೆ ಮತ್ತು ಭರವಸೆಗಳೆರಡನ್ನೂ ಹೊತ್ತಿರುವ ಮೌನ ಹಾಗೂ ಗೊಂದಲಗಳ ನಡುವಿನಲ್ಲೂ ಕೂತು ಮುಕ್ತ ಮಾತುಕತೆ ನಡೆಸಲು ಕಲ್ಪಿಸಿರುವ ಅವಕಾಶವಷ್ಟೆ.

ಪ್ರೀತಿಯಿಂದ,
**ಗಮನ ಮಹಿಳಾ ಸಮೂಹ**
**ಎಸ್‌ಐಇಡಿಎಸ್**
**ಸಿಬಿಪಿಎಸ್**

